# ಕರ್ನಾಟಕ ಸರ್ಕಾರದ ನಡವಳಿ

**ವಿಷಯ;** ಶ್ರೀ ಮಹೇಶ್ ಗೌಡ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರೆಹಂಚಿನಾಳ ಗ್ರಾಮ ಪಂಚಾಯಿತಿ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೊಪ್ಪಳ ಜಿಲ್ಲಾ ಪಂಚಾಯಿತಿ ರವರು ವಿಧಿಸಿರುವ ದಂಡನಾ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಕುರಿತು.

**ಓದಲಾಗಿದೆ.**
1) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೊಪ್ಪಳ ಜಿಲ್ಲಾ ಪಂಚಾಯಿತಿ ರವರ ದಂಡನಾ ಆದೇಶ ಸಂಖ್ಯೆ: ಜಿಪಂಕೊ/ಸಿಸಿಎ/ಸಿಆರ್-05/2021-22/175, ದಿನಾಂಕ:19.04.2021
2) ಶ್ರೀ ಮಹೇಶ್ ಗೌಡ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರೆಹಂಚಿನಾಳ ಗ್ರಾಮ ಪಂಚಾಯಿತಿ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ಮೇಲ್ಮನವಿ ದಿನಾಂಕ:18.08.2021

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಶ್ರೀ ಮಹೇಶ್‌ಗೌಡ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರೇಹಂಚಿನಾಳ ಗ್ರಾಮ ಪಂಚಾಯಿತಿ, ಯಲಬುರ್ಗ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರ ವಿರುದ್ಧದ ಆರೋಪದ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ಇವರು ಆದೇಶ ಸಂಖ್ಯೆ:ಜಿಪಂಕೊ/ಆಡಳಿತ/ಎಸಿಬಿ/ಸಿಆರ್/5/2021-22, ದಿನಾಂಕ:08.06.2021 ರಲ್ಲಿ ಕೊಪ್ಪಳ ಜಿಲ್ಲೆಯಾದ್ಯಂತ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಜನರಲ್ಲಿ ಅರಿವು ಮೂಡಿಸಲು ಹಾಗೂ ಜಾಗೃತಿಯಿಂದ ಇರುವ ಸಂಬಂಧ ನಿರ್ದೇಶನಗಳನ್ನು ನೀಡಲು ದಿನಾಂಕ:15.04.2021 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕೋವಿಡ್-19 ಜಾಗೃತಿ ಸಭೆಯನ್ನು ಜಿಲ್ಲಾಧಿಕಾರಿಯವರ ಸೂಚನೆ ಪತ್ರ ದಿನಾಂಕ:14.04.2021 ರನ್ವಯ ಸಭೆಯನ್ನು ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಉಪಸ್ಥಿತರಿರಲು ಸೂಚಿಸಿ, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿ ಸಿಬ್ಬಂದಿಗಳಿಗೆ ಸೂಚನೆ ಪತ್ರವನ್ನು ಕಳುಹಿಸಿದ್ದು, ಸದರಿ ಸಭೆಯ ಬಗ್ಗೆ ಮಾಹಿತಿ ಇದ್ದರೂ ಸಹಿತ ದಿನಾಂಕ:15.04.2021 ರಂದು ನಡೆದ ಸಭೆಗೆ ಕೊಪ್ಪಳ ತಾಲ್ಲೂಕಿನ 1) ಮಾದಿನೂರು ಹೆಚ್ಚುವರಿ ಅಗಳಕೇರಾ ಗ್ರಾಮ ಪಂಚಾಯಿತಿ, ಕೊಪ್ಪಳ ತಾಲ್ಲೂಕು, 2) ಹಿರೇವಂಕಲಕುಂಟಾ ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, 3) ಯರೇಹಂಚಿನಾಳ ಗ್ರಾಮ ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, 03) ಕೇಸೂರು ಗ್ರಾಮ ಪಂಚಾಯಿತಿ, ಕುಷ್ಟಗಿ ತಾಲ್ಲೂಕು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದಿನಾಂಕ:15.04.2021 ರಂದು ನಡೆದ ಸಭೆಗೆ ಹಾಜರಾಗಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ ರವರ ವರದಿಯ ಹಿನ್ನೆಲೆಯಲ್ಲಿ ಮೇಲಿನ 04 ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ದಿನಾಂಕ:19.04.2021ರ ಆದೇಶದಲ್ಲಿ ಅಮಾನತ್ತುಗೊಳಿಸಿದ್ದಾರೆ.

ಆಪಾದಿತ ನೌಕರರುಗಳಿಗೆ ದಿನಾಂಕ:22.04.2021 ರಂದು ಕಾರಣ ಕೇಳುವ ನೋಟೀಸ್ ಜಾರಿ ಮಾಡಿ, ಅವರುಗಳಿಂದ ವಿವರಣೆ/ಸಮಜಾಯಿಷಿಯನ್ನು ಪಡೆದುಕೊಂಡು ಅವರ ಲಿಖಿತ ಹೇಳಿಕೆ/ಸಮಜಾಯಿಷಿಯನ್ನು ಒಪ್ಪದೇ ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11(5) ರ ಪ್ರಕಾರ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಕೊಪ್ಪಳ ಇವರನ್ನು ವಿಚಾರಣಾಧಿಕಾರಿಯೆಂದು ನೇಮಿಸಿ ದಿನಾಂಕ:11.05.2021 ರಂದು ಆದೇಶ ಹೊರಡಿಸಿರುತ್ತಾರೆ.

ವಿಚಾರಣಾಧಿಕಾರಿಯವರು ಪ್ರಕರಣದ ಪೂರ್ಣಪ್ರಮಾಣದ ವಿಚಾರಣೆಯನ್ನು ನಡೆಸಿ, ವಿಚಾರಣಾ ವರದಿಯನ್ನು ದಿನಾಂಕ:20.05.2021 ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ಇವರಿಗೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ಶ್ರೀ ಮಹೇಶ್‌ಗೌಡ, ಪಂ.ಅ.ಅ. ಇವರು ದಿನಾಂಕ:19.05.2021 ರಂದು ಜರುಗಿದ ವಿಚಾರಣೆಯಲ್ಲಿ ಹಾಜರಾಗಿದ್ದು, ಈ ಕೆಳಕಂಡಂತೆ ಹೇಳಿಕೆಯನ್ನು ನೀಡಿರುತ್ತಾರೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ರವರು ಮಾಡಿರುವ ಆರೋಪಗಳನ್ನು ಒಪ್ಪಿರುತ್ತೇನೆ. ಆದರೆ ಸದರಿ ಸಭೆ ನಡೆದ ದಿನಾಂಕ:15.04.2021 ರಂದು ವೈದ್ಯಕೀಯ ಕಾರಣಗಳಿಂದಾಗಿ, ಡಾ॥ ಚಿಮ್ಮಲಗಿ ಆಸ್ಪತ್ರೆ ಕೊಪ್ಪಳ ಇವರಲ್ಲಿ ಚಿಕಿತ್ಸೆಗೆ ಹಾಜರಾಗಿರುತ್ತೇನೆ. ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡಬೇಕೆಂದು ಬಯಸಿದ್ದೆನು. ಆದರೆ ಆ ದಿನದಂದು ಗಡಿಬಿಡಿಯಲ್ಲಿ ಮೊಬೈಲ್ ದೂರವಾಣಿ ಮರೆತು ಮನೆಯಲ್ಲಿಯೆ ಬಿಟ್ಟು ಬಂದಿದ್ದೆನು. ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಂತರ ಚಿಕಿತ್ಸೆ ಪಡೆದು, ಆಸ್ಪತ್ರೆಯಿಂದ ಹೊರಬರಲು ಮಧ್ಯಾಹ್ನ 3:00 ಗಂಟೆಯಾಗಿದ್ದು, ಸದರಿ ಸಭೆಗೆ ಹಾಜರಾಗಲು ಸಾಧ್ಯಾಗಿಲ್ಲವೆಂದು ತಿಳಿಸಿರುತ್ತಾರೆ. ಅದರಂತೆ ಆಪಾದಿತ ನೌಕರರು ಅವರ ಮೇಲಿನ ಆರೋಪಗಳನ್ನು ಒಪ್ಪಿಕೊಂಡಿರುವ ಪ್ರಯುಕ್ತ ಆಪಾದಿತ ನೌಕರರ ಮೇಲಿನ ಆರೋಪವು ಸಾಬೀತಾಗಿರುತ್ತದೆ ಎಂದು ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿದ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ಇವರು ಆಪಾದಿತ ನೌಕರರುಗಳ ಮೇಲಿನ ಆರೋಪಗಳು ರುಜುವಾತಾಗಿರುವುದಾಗಿ ಸಲ್ಲಿಸಿರುವ ವಿಚಾರಣಾ ವರದಿಯೊಂದಿಗೆ ಆಪಾದಿತ ನೌಕರರುಗಳಿಗೆ 2ನೇ ಕಾರಣ ಕೇಳುವ ನೋಟೀಸ್ ಜಾರಿಗೊಳಿಸದೇ ನೇರವಾಗಿ ಆಪಾದಿತ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(iii) ರನ್ವಯ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಹಾಗೂ ಕೆ.ಸಿ.ಎಸ್.ಆರ್. ನಿಯಮ 100(7)(5) ರನ್ವಯ ಅವರುಗಳ ಹಕ್ಕಿನಲ್ಲಿರುವ ಪರಿವರ್ತಿತ ರಜೆಯನ್ನು ಮಂಜೂರು ಮಾಡಲು ಹಾಗೂ ದಿನಾಂಕ:15.04.2021ರ ಗೈರುಹಾಜರಿಯನ್ನು ವೇತನ ರಹಿತ ರಜೆ ಎಂದು ಪರಿಗಣಿಸಲು ಆದೇಶಿಸಿದ್ದಾರೆ.

ಮೇಲೆ ಓದಲಾದ ಕ್ರಮಾಂಕ(2)ರಲ್ಲಿ ಶ್ರೀ ಮಹೇಶ್‌ಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ದಿನಾಂಕ:18.08.2021 ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ರವರು ದಿನಾಂಕ:08.06.2021 ರ ಆದೇಶದಲ್ಲಿ ವಿಧಿಸಿರುವ ದಂಡನೆ ಆದೇಶವನ್ನು ರದ್ದುಪಡಿಸಬೇಕೆಂದು ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿಯಲ್ಲಿ ಅಂಶಗಳ ಕುರಿತು ತುಲನಾತ್ಮಕವಾಗಿ ಪರಿಶೀಲಿಸಿ, ಅಭಿಪ್ರಾಯದೊಂದಿಗೆ ವಿಚಾರಣೆಗೆ ಸಂಬಂಧಿಸಿದ ಮೂಲ ಕಡತವನ್ನು ಸರ್ಕಾರಕ್ಕೆ ಒದಗಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ಕೋರಲಾಗಿತ್ತು. ಅದರಂತೆ ದಿನಾಂಕ:23.09.2021 ರ ಪತ್ರದೊಂದಿಗೆ ಮೂಲ ಕಡತವನ್ನು ಒದಗಿಸಿರುತ್ತಾರೆ. ಸದರಿ ಕಡತ ಹಾಗೂ ಕಡತದ ಜೊತೆಯಲ್ಲಿ ಸಲ್ಲಿಸಿರುವ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ, ಆಪಾದಿತ ನೌಕರರು ದಿನಾಂಕ:15.04.2021 ರಂದು ಜಿಲ್ಲಾಧಿಕಾರಿ, ಕೊಪ್ಪಳ ಇವರು ಜರುಗಿಸಿದ ಜಾಗೃತಿ ಸಮಿತಿ ಸಭೆಯು ಪ್ರಮುಖವಾದ ಸಭೆಯಾಗಿದ್ದು, ಸದರಿ ಪ್ರಮುಖ ಸಭೆಗೆ ಮೇಲ್ಮನವಿದಾರರು ಯಾವುದೇ ಪೂರ್ವಾನುಮತಿ ಪಡೆಯದೇ, ಸಭೆಗೆ ಗೈರು ಹಾಜರಾಗಿರುವುದರಿಂದ ಹಾಗೂ ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಅವರೇ ಒಪ್ಪಿಕೊಂಡಿರುವುದರಿಂದ ಇವರ ಕರ್ತವ್ಯ ನಿರ್ಲಕ್ಷತೆಯನ್ನು ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆ 2005 ರನ್ವಯ ಸಭೆಗೆ ಗೈರು ಹಾಜರಾದ ನೌಕರರುಗಳಿಗೆ ದಂಡನೆ ವಿಧಿಸಿರುವುದು ಕಂಡು ಬರುತ್ತದೆ.

ಆದುದರಿಂದ, ಆಪಾದಿತ ಸರ್ಕಾರಿ ನೌಕರ ಶ್ರೀ ಮಹೇಶ್‌ಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ವೈದ್ಯಕೀಯ ಕಾರಣಗಳ ಮೇಲೆ ಅವರ ದೂರವಾಣಿಯಿಂದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಯಲಬುರ್ಗಾ ರವರಿಗೆ "I am not well due imbalance of BP Going to hospital Kindly give me permition sir" ಎಂದು ಮೊಬೈಲ್ ಸಂದೇಶ ಕಳುಹಿಸಿರುತ್ತಾರೆ. ಈ ಸಂದರ್ಭದಲ್ಲಿ ಚಿಮ್ಮಲಗಿ ಆಸ್ಪತ್ರೆ ಕೊಪ್ಪಳ ಇಲ್ಲಿ ಚಿಕಿತ್ಸೆ ಪಡೆದಿರುವ ಹಾಗೂ ವೈದ್ಯರ ಸಲಹೆ ಮತ್ತು ವೈದ್ಯಕೀಯ ವರದಿಯ ಪ್ರತಿಯನ್ನು ಲಗತ್ತಿಸಿ, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ಜಿಲ್ಲೆ ಇವರು ವಿಧಿಸಿರುವ ದಂಡನಾದೇಶವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

ಆಪಾದಿತ ನೌಕರರು ಸಲ್ಲಿಸಿರುವ ಮೇಲ್ಮನವಿಯಲ್ಲಿ ಅವರ ಅನಾರೋಗ್ಯ ನಿಮಿತ್ತ, ದಿನಾಂಕ:15.04.2021 ರ ಸಭೆಯಲ್ಲಿ ಹಾಜರಾಗಲು ಸಾಧ್ಯವಾಗಿಲ್ಲವೆಂದು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ಮತ್ತು ಈ ಬಗ್ಗೆ ತಾಲ್ಲೂಕು ಪಂಚಾಯಿತಿ, ಕಾರ್ಯನಿರ್ವಾಹಕ ಅಧಿಕಾರಿಗೆ ದೂರವಾಣಿ ಸಂದೇಶದ ಮೂಲಕ ಅನುಮತಿ ಕೋರಿರುವ ಹಿನ್ನೆಲೆಯಲ್ಲಿ ಹಾಗೂ ವಿಚಾರಣಾ ವರದಿಗೆ ಪ್ರತಿಯಾಗಿ ಆಪಾದಿತ ನೌಕರರಿಗೆ ಹೇಳಿಕೆ ಸಲ್ಲಿಸಲು ಅವಕಾಶ ನೀಡದೇ ಇರುವುದೂ ಸಹ ಕಾರ್ಯವಿದಾನದ ಕೊರತೆಯ ಲೋಪವಾಗಿದೆ. ಹಾಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೊಪ್ಪಳ ರವರು ವಿಧಿಸಿರುವ ದಂನಾ ಆದೇಶವು ಊರ್ಜಿತವಾಗುವುದಿಲ್ಲವೆಂದು ಮನಗಂಡ ಅಪೀಲು ಪ್ರಾಧಿಕಾರವು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೊಪ್ಪಳ ರವರ ದಂಡನಾದೇಶವನ್ನು ರದ್ದುಪಡಿಸಿ ಆಪಾದಿತ ನೌಕರನಿಗೆ ವಾಗ್ದಾಂಡನೆ ವಿಧಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 128 ಗ್ರಾಪಂಕಾ 2021, ಬೆಂಗಳೂರು, ದಿನಾಂಕ:12.07.2022</u>**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೊಪ್ಪಳ ಜಿಲ್ಲಾ ಪಂಚಾಯಿತಿ, ಕೊಪ್ಪಳ ರವರ ದಿನಾಂಕ:19.04.2021ರ ಆದೇಶವನ್ನು ರದ್ದುಪಡಿಸಿದೆ ಮತ್ತು ಶ್ರೀ ಮಹೇಶ್ ಗೌಡ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರೆಹಂಚಿನಾಳ ಗ್ರಾಮ ಪಂಚಾಯಿತಿ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರಿಗೆ **ವಾಗ್ದಂಡನೆ** ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
B. Naveenkumar 12/07/22
(ಬಿ.ನವೀನ್ ಕುಮಾರ್)
ಉಪ ನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

12/7/22

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ಕೊಪ್ಪಳ ಜಿಲ್ಲೆ, ಕೊಪ್ಪಳ.
3) ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ.
4) ಶ್ರೀ ಮಹೇಶ್ ಗೌಡ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರೆಹಂಚಿನಾಳ ಗ್ರಾಮ ಪಂಚಾಯಿತಿ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ
5) ನಿರ್ದೇಶಕರು (ಇ-ಆಡಳಿತ), ಇಲಾಖಾ ವೆಬ್-ಸೈಟಿನಲ್ಲಿ ಪ್ರಕಟಿಸಲು.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.